ಸಂಯುಕ್ತ ಕರ್ನಾಟಕ

ಬುಧವಾರ 12 ಜೂನ್ 2024


## ಕೃಷಿ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯವು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ನವೆಂಬರ್ ತಿಂಗಳಲ್ಲಿ ಆಯೋಜಿಸಲಿರುವ ಕೃಷಿ ಮೇಳದಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅರ್ಜಿ ನಮೂನೆಯು ಕೃಷಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲೂ (www.uasbangalore.edu.in) ಲಭ್ಯವಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಜು.31ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 080–23330153ಗೆ ಸಂಪರ್ಕಿಸಬಹುದು.


ಕನ್ನಡಪ್ರಭ

ಬುಧವಾರ 12.06.2024


## ಕೃಷಿ ವಿವಿಯಿಂದ ವಿವಿಧ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ರಾಜ್ಯ ಮಟ್ಟದ 'ಮಾಜಿಪ್ರಧಾನಿಎಚ್.ಡಿ.ದೇವೇಗೌಡಅತ್ಯುತ್ತಮರೈತ, ರೈತ ಮಹಿಳೆ ಪ್ರಶಸ್ತಿ', 'ಡಾ.ಎಂ.ಎಚ್.ಮರಿಗೌಡ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ' ಹಾಗೂ ಕೃಷಿ ವಿವಿ ವ್ಯಾಪ್ತಿಯ 10 ಜಿಲ್ಲೆಗಳಿಂದ 'ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ', 'ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ', 'ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ' ಪ್ರಶಸ್ತಿಗೆ ಅರ್ಜಿ ಸಲ್ಲಿಸ ಬಹುದು. ವಿವಿ ವ್ಯಾಪ್ತಿಯ 10 ಜಿಲ್ಲೆಯ ಸಾಧಕರಿಂದ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ, ತಾಲ್ಲೂಕು ಮಟ್ಟದ ಯುವ ರೈತ ಹಾಗೂ ಯುವ ರೈತ ಮಹಿಳೆ ಪ್ರಶಸ್ತಿಗಳಿಗೂ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಯು ವಿವಿಯ ವೆಬ್‌ಸೈಟ್ www.uasbangalore.edu.in ನಲ್ಲಿ ಲಭ್ಯವಿದೆ. ಅರ್ಜಿ ಯನ್ನು ಜು.31ರೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ವಿಸ್ತರಣಾ ನಿರ್ದೇಶಕರ ಕಚೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065 ಅಥವಾ ದೂರವಾಣಿ 080-23330153 ಸಂಪರ್ಕಿಸ ಬಹುದೆಂದು ವಿವಿ ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ.


ವಾರ್ತಾ ಭಾರತಿ

Jun 12, 2024


## ಕೃಷಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂ.11: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಕೃಷಿ ಪ್ರಶಸ್ತಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಜ್ಯಮಟ್ಟದ ಪ್ರಶಸ್ತಿಗಳು (ರಾಜ್ಯ ವ್ಯಾಪ್ತಿ), ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ/ ರೈತ ಮಹಿಳೆ ಪ್ರಶಸ್ತಿ, ಡಾ.ಎಂ.ಎಚ್.ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ರಾಜ್ಯ ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಕ್ಯಾನ್‌ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ, ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ.

ತಾಲೂಕುಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 61 ತಾಲೂಕುಗಳು), ತಾಲೂಕು ಮಟ್ಟದ ಯುವ ರೈತ ಪ್ರಶಸ್ತಿ ಹಾಗೂ ತಾಲೂಕುಮಟ್ಟದ ಯುವ ರೈತ ಮಹಿಳೆ ಪ್ರಶಸ್ತಿಗಳಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯನ್ನು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರವರ ಕಚೇರಿ, ಅಥವಾ ವಿಸ್ತರಣಾ ನಿರ್ದೇಶಕರ ಕಚೇರಿ, ಜಿಕೆವಿಕೆ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜು.31ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ವಿಸ್ತರಣಾ ನಿರ್ದೇಶಕರ ಕಚೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065 ಇವರನ್ನು ಅಥವಾ ದೂರವಾಣಿ ಸಂಖ್ಯೆ. 080-23330153ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟನೆ ತಿಳಿಸಿದೆ.

ವಿಜಯವಾಣಿ
ಬುಧವಾರ 12 ಜೂನ್ 2024

## ಕೃಷಿ ವಿವಿಯಿಂದ ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಜು.31 ಕೊನೆಯ ದಿನ. ನವೆಂಬರ್‌ನಲ್ಲಿ ನಡೆಯಲಿರುವ ಕೃಷಿಮೇಳದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಜಿಕೆವಿಕೆಯಲ್ಲಿ ಇರುವ ವಿಸ್ತರಣಾ ನಿರ್ದೇಶಕರ ಕಚೇರಿ, ಕೃಷಿ ವಿಜ್ಞಾನ ಕೇಂದ್ರಗಳಾದ ಹಾಡೋನಹಳ್ಳಿ (ದೊಡ್ಡಬಳ್ಳಾಪುರ), ಚಂದುರಾಯನಹಳ್ಳಿ (ಮಾಗಡಿ), ಕಂದಲಿ (ಹಾಸನ), ಕೊನೇನಹಳ್ಳಿ (ತಿಪಟೂರು), ವಿ.ಸಿ. ಫಾರ್ಮ್ (ಮಂಡ್ಯ), ಕುರುಬೂರು ಫಾರ್ಮ್ (ಚಿಂತಾಮಣಿ), ಹರದನಹಳ್ಳಿ (ಚಾಮರಾಜನಗರ) ಹಾಗೂ ವಿಸ್ತರಣಾ ಶಿಕ್ಷಣ ಘಟಕಗಳಲ್ಲಿ (ನಾಗನಹಳ್ಳಿ- ಮೈಸೂರು) ದೊರೆಯುತ್ತದೆ. ಕೃಷಿ ವಿವಿಯ ವೆಬ್‌ಸೈಟ್‌ನಲ್ಲೂ www.uasbangalore.edu.in ಲಭ್ಯವಿದೆ. ಹೆಚ್ಚಿನ ಮಾಗಿಗಾಗಿ ದೂರವಾಣಿ ಸಂಖ್ಯೆ 080- 2333 0153 ಸಂಪರ್ಕಿಸಬಹುದು.

» ಜು.31 ಕೊನೆಯ ದಿನಾಂಕ

ವಿಜಯ ಕರ್ನಾಟಕ
ರಾಜ್ಯ | STATE
ಬುಧವಾರ, 12 ಜೂನ್ 2024,

## ಅತ್ಯುತ್ತಮ ರೈತ, ರೈತ ಮಹಿಳೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ನಾನಾ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯ ಮಟ್ಟದ ಪ್ರಶಸ್ತಿಗಳು (ರಾಜ್ಯ ವ್ಯಾಪ್ತಿ) ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ, ಡಾ. ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ, ತಾಲೂಕು ಮಟ್ಟದ ಯುವ ರೈತ ಪ್ರಶಸ್ತಿ/ಯುವ ರೈತ ಮಹಿಳೆ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು ಸಲ್ಲಿಸಬಹುದು.

ಬೆಂಗಳೂರು ಕೃಷಿ ವಿವಿಯು ನವೆಂಬರ್ ತಿಂಗಳಲ್ಲಿ ಆಯೋಜಿಸಲಿರುವ ಕೃಷಿ ಮೇಳದಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ನಿಗದಿತ ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರ ಕಚೇರಿ, ವಿಸ್ತರಣಾ ನಿರ್ದೇಶಕರ ಕಚೇರಿ, ಜಿಕೆವಿಕೆ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರಗಳು ವಿಸ್ತರಣಾ ಶಿಕ್ಷಣ ಘಟಕ (ನಾಗನಹಳ್ಳಿ-ಮೈಸೂರು)ದಲ್ಲಿ ದೊರೆಯುತ್ತವೆ.

ಅರ್ಜಿ ನಮೂನೆಯು ಬೆಂಗಳೂರು ಕೃಷಿ ವಿವಿಯ ವೆಬ್‌ಸೈಟ್: www.uasbangalore.edu.in ಲಭ್ಯ. ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ 31ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ఈనాడు
బుధవారం జూన్ 12, 2024

## ఉత్తమ రైతుల పురస్కారాలకు దరఖాస్తులు ఆహ్వానం

**బెంగళూరు(యశ్వంతపుర), న్యూస్‌టుడే: బెంగళూరు** వ్యవసాయ విశ్వవిద్యాలయం రాష్ట్ర, జిల్లా, తాలూకాస్థాయి ఉత్తమ రైతు, ఉత్తమ రైతు మహిళా పురస్కారాలకు రైతుల నుంచి దరఖాస్తులు ఆహ్వానిస్తోంది. రాష్ట్ర స్థాయి మాజీ ప్రధాని హెచ్.డి. దేవెగౌడ ఉత్తమ రైతు, ఉత్తమ రైతు మహిళా పురస్కారాలు, డాక్టర్ ఎం. హెచ్. మరిగౌడ రాష్ట్రస్థాయి ఉత్తమ ఉద్యానవనాల రైతు పురస్కారం, జిల్లా స్థాయి క్యాన్‌బ్యాంకు ఉత్తమ కృషిక పురస్కారం, డాక్టర్ ఆర్.ద్వారకీనాథ్ ఉత్తమ రైతు, ఉత్తమ విస్తరణ కార్యకర్త పురస్కారాలతో పాటు జిల్లా స్థాయిలో ప్రగతిపర రైతు పురస్కారాలు, ప్రగతిపర రైతు మహిళా పురస్కారాలు, తాలూకా స్థాయి ఉత్తమ యువ రైతు, ఉత్తమ యువ రైతు మహిళ పురస్కారాలకు దరఖాస్తులు ఆహ్వానిస్తున్నట్లు విశ్వవిద్యాలయం డైరెక్టర్ వి.ఎల్.మధుప్రసాద్ వివరించారు. జులై 31లోగా దరఖాస్తు చేసుకోవాలని, మరిన్ని వివరాలకు ఫోన్‌నెం:080-23330153లకు సంప్రదించాలని ఆయన కోరారు.

ವಿಶ್ವವಾಣಿ
12.06.2024 ಬುಧವಾರ

## ಕೃಷಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕುಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯಮಟ್ಟದ ಪ್ರಶಸ್ತಿಗಳು (ರಾಜ್ಯ ವ್ಯಾಪ್ತಿ), ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ / ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್. ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ರಾಜ್ಯಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಜಿಲ್ಲಾಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ, ತಾಲ್ಲೂಕು ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 61 ತಾಲ್ಲೂಕುಗಳು), ತಾಲ್ಲೂಕುಮಟ್ಟದ ಯುವ ರೈತ ಪ್ರಶಸ್ತಿ ಹಾಗೂ ತಾಲ್ಲೂಕು ಮಟ್ಟದ ಯುವ ರೈತ ಮಹಿಳೆ ಪ್ರಶಸ್ತಿಗಳಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

## ತೋಟಗಾರಿಕೆ ಇಲಾಖೆಯಿಂದ ಅರ್ಜಿಗಳು ಆಹ್ವಾನ


ಮಾಗಡಿ: 2024–25 ನೇ ಸಾಲಿನಲ್ಲಿ ತಾಲ್ಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿವಿಧ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರರಾದ ಸಂತೋಷ್ ತಿಳಿಸಿದ್ದಾರೆ. ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಸಹಾಯಧನ ಸೌಲಭ್ಯಗಳನ್ನು ಪಡೆಯಲು ಅರ್ಹ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತ ಬಾಂಧವರಿಂದ ಹಾಗೂ ಪ್ಯಾಕ್ ಹೌಸ್ ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ರೈತರು ಜೂ.20 ರೊಳಗಾಗಿ ಈ ತೋಟಗಾರಿಕೆ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಲ್ಲದೇ ಅರ್ಜಿಸಲ್ಲಿಸುವಾಗ ರೈತರು ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಜೆರಾಕ್ಸ್ ಪ್ರತಿ, ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ವರ್ಗದವರಾಗಿದ್ದರೆ ಜಾತಿ ಪ್ರಮಾಣ ಪತ್ರ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಸಲ್ಲಿಸಬೇಕು.

SamyuthaKarnataka
Pg.09

## ಈರುಳ್ಳಿ ಬೆಲೆ ಹೆಚ್ಚಳದ ಆತಂಕ

ಬೆಂಗಳೂರು: ಬಿಸಿಲಿನ ತಾಪ ಕಡಿಮೆಯಾಗಿ ಮಳೆ ಸುರಿಯುತ್ತಿರುವ ಬೆನ್ನ ಹಿಂದೆಯೇ ಗ್ರಾಹಕರಿಗೆ ಈರುಳ್ಳಿ ಕಣ್ಣೀರು ತರಿಸಲು ಸಿದ್ಧವಾಗಿದ್ದು ಪ್ರತಿ ಕೆ.ಜಿ.ಗೆ 75 ರೂ. ಬೆಲೆ ನಿಗದಿಯಾಗುತ್ತಿದೆ.

ಈಗಾಗಲೇ ಗುಣಮಟ್ಟದ ಈರುಳ್ಳಿಗೆ 50ರಿಂದ 55 ರೂ. ದರವಿದ್ದು, ಇನ್ನೊಂದು ವಾರದೊಳಗೆ ಇದರ ಬೆಲೆ 75 ರೂ. ಆಗಲಿದೆ ಎಂದು ವ್ಯಾಪಾರಿಗಳೇ ಹೇಳುತ್ತಿದ್ದಾರೆ.



ದೇಶದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಈರುಳ್ಳಿ ದರ ನಿಧಾನವಾಗಿ ಏರಿಕೆಯಾಗುತ್ತಲೇ ಇದೆ. ಮುಂದಿನ ವಾರ (ಜೂ. 17) ಬಕ್ರೀದ್ ಹಬ್ಬ ಇರುವುದರಿಂದ ಈರುಳ್ಳಿಗೆ ಬೇಡಿಕೆ ಹೆಚ್ಚಳವಾಗಿದ್ದು ಈ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗುತ್ತಿದೆ. ಹಾಲಿ ಇರುವ ದರಕ್ಕಿಂತ ಶೇ. 30ರಷ್ಟು ಹೆಚ್ಚಳವಾಗಲಿದೆ ಎಂದು ವ್ಯಾಪಾರಿಗಳು ಹೇಳುತ್ತಿದ್ದಾರೆ.

ಪ್ರಸ್ತುತ ಬೆಂಗಳೂರು ಸೇರಿದಂತೆ ರಾಜ್ಯ ಇನ್ನಿತರ ಭಾಗದಲ್ಲಿ ಪ್ರತಿ ಕೆ.ಜಿ. ಈರುಳ್ಳಿಗೆ 40ರಿಂದ 50 ರೂ. ಇದೆ. ಇನ್ನೊಂದು ವಾರದೊಳಗೆ 75 ಆದರೂ ಅಚ್ಚರಿ ಇಲ್ಲ. ಇದಕ್ಕೆ ಸಗಟು ವ್ಯಾಪಾರಿಗಳು ಅತಿಯಾದ ದಾಸ್ತಾನು ಮಾಡುತ್ತಿರುವುದಲ್ಲದೆ, ಶೇ. 40ರಷ್ಟು ರಫ್ತು ಮಾಡಲು ಅವಕಾಶ ಇರುವುದರಿಂದ ಬೆಲೆ ಹೆಚ್ಚಳವಾಗಲು ಕಾರಣ ಎನ್ನಲಾಗಿದೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಕೇಂದ್ರಸರ್ಕಾರ ಈರುಳ್ಳಿಯ ವಿದೇಶ ರಪ್ತು ನಿಷೇಧದ ನಿರ್ಧಾರವನ್ನು ಹಿಂಪಡೆದುಕೊಂಡಿತ್ತು. ಈ ಸಂದರ್ಭದಲ್ಲಿ ಈರುಳ್ಳಿ ಬೆಲೆ ಅಲ್ಪ ಪ್ರಮಾಣದಲ್ಲಿ ಇಳಿಮುಖವಾದರೂ ನಂತರ ಹಂತ ಹಂತವಾಗಿ ಹೆಚ್ಚುತ್ತಾ ಹೋಯಿತು. ಈಗ ಮಾರುಕಟ್ಟೆಗಳಿಗೆ ಈರುಳ್ಳಿ ಸರಬರಾಜು ಇಳಿಮುಖವಾಗಿದೆ. ನಡುವೆ ಈರುಳ್ಳಿ ಸರಬರಾಜು ಕೊರತೆ ಹಾಗೂ ಮುಂದಿನ ವಾರ ಈದ್ ಮಿಲಾದ್ ಹಬ್ಬ ಇರುವುದರಿಂದ ಈರುಳ್ಳಿ ಬೆಲೆ ಏರಿಕೆಯಾಗಲಿದೆ. ಹಬ್ಬದ ನಂತರವೂ ಬೆಲೆ ಇಳಿಯುವ ಸಾಧ್ಯತೆ ಕಡಿಮೆ ಎನ್ನುವ ವ್ಯಾಪಾರಿಗಳು ಬೆಲೆ ಏರಿಕೆಗೆ ಮಳೆ ಕಾರಣ ತಿಳಿಸುವ ಸಾಧ್ಯತೆಗಳಿವೆ ಎನ್ನುತ್ತಾರೆ.

SamyuthaKarnataka
Pg.07

SamyuthaKarnataka Pg.08

# ಆಹಾರಧಾನ್ಯ ಉತ್ಪಾದನೆ ಅಲ್ಪ ಇಳಿಕೆ ಸಂಭವ

ದೇಶೀಯ ಆಹಾರಧಾನ್ಯ ಉತ್ಪಾದನೆ 2023-24ನೇ ಸಾಲಿನಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದೆಂದು ಕೇಂದ್ರ ಕೃಷಿ ಸಚಿವಾಲಯವು ಅಂದಾಜಿಸಿದೆ. ಗೋದಿ, ಭತ್ತ ಉತ್ಪಾದನೆ ಹೆಚ್ಚಾಗಲಿದ್ದರೂ ಬೇಳೆಕಾಳು ಬೆಳೆಗಳು, ಗೋವಿನ ಜೋಳ ಹಾಗೂ ಎಣ್ಣೆಬೀಜಗಳ ಇಳುವರಿ ಕಡಿಮೆಯಾಗಲಿರುವ ಸಾಧ್ಯತೆಯೇ ಇದಕ್ಕೆ ಕಾರಣವೆಂದು ತಿಳಿಸಿದೆ.

ಕಳೆದ ವರ್ಷ ಆಹಾರ ಧಾನ್ಯಗಳ ಉತ್ಪಾದನೆ 329.69 ದಶಲಕ್ಷ ಟನ್‌ದಷ್ಟಾಗಿತ್ತು. ಈಗ ಅದು 328.85 ದಶಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದೆ. ಗೋವಿನಜೋಳ, ಬೇಳೆಕಾಳುಗಳ ಉತ್ಪಾದನೆ ಶೇ.6ಕ್ಕಿಂತ ಅಧಿಕ ಪ್ರಮಾಣದಷ್ಟು ಕಡಿಮೆಯಾಗುವದೆಂದು ಕೇಂದ್ರ ಕೃಷಿ ಸಚಿವಾಲಯವು ಕಳೆದ ವಾರ ಬಿಡುಗಡೆ ಮಾಡಿರುವ ಅಂದಾಜು ವರದಿಯಲ್ಲಿ ತಿಳಿಸಿದೆ, 2022-23ನೇ ಸಾಲಿನಲ್ಲಿ ಬೇಳೆಕಾಳು ಉತ್ಪಾದನೆ 26.06 ದಶಲಕ್ಷ ಟನ್‌ದಷ್ಟಿತ್ತು, ಈಗ ಅದು 24.47 ದಶಲಕ್ಷ ಟನ್‌ದಷ್ಟಾಗಲಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಬರ ಪರಿಸ್ಥಿತಿ ಕಾರಣ ಬೇಳೆ ಕಾಳು ಉತ್ಪಾದನೆಗೆ ಹಿನ್ನಡೆಯಾಗಿದೆ.

**ಗೋದಿ ಬಂಪರ್**

ಪಂಜಾಬ್, ಹರ್ಯಾಣ ಹಾಗೂ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಬಂಪರ್ ಗೋದಿ ಇಳುವರಿ ಹಿನ್ನೆಲೆಯಲ್ಲಿ 112.92 ದಶಲಕ್ಷ ಟನ್‌ದಷ್ಟಾಗಲಿದೆ. ಕಳೆದ ವರ್ಷ 110.55 ದಶಲಕ್ಷ ಟನ್‌ದಷ್ಟಿತ್ತು. ಅಕ್ಕಿ ಉತ್ಪಾದನೆ 136.7 ದಶಲಕ್ಷ ಟನ್‌ದಷ್ಟಾಗಲಿದೆ. ಹಿಂದಿನ ವರ್ಷ ಇದು 135.76 ದಶಲಕ್ಷ ಟನ್‌ದಷ್ಟಿತ್ತೆಂದು ತಿಳಿಸಿದೆ. ತೊಗರಿ ಉತ್ಪಾದನೆ 3.39 ದಶಲಕ್ಷ ಟನ್, ಚೆನ್ನಂಗಿ 1.75 ದಶಲಕ್ಷ ಟನ್‌ದಷ್ಟಾಗಲಿದೆ. ಉದ್ದು 2.3 ದಶಲಕ್ಷ ಟನ್, ಹೆಸರು 2.91 ದಶಲಕ್ಷ ಟನ್ ಹಾಗೂ ಇತರೇ ಬೇಳೆಕಾಳು ಬೆಳೆಗಳು 2.56 ದಶಲಕ್ಷ ಟನ್‌ದಷ್ಟಾಗಲಿದೆ.

ಎಲ್ಲಾ ಎಣ್ಣೆಬೀಜಗಳ ಉತ್ಪಾದನೆ 39.59 ದಶಲಕ್ಷ ಟನ್‌ದಷ್ಟಾಗಲಿದೆ. ಕಳೆದ ಸಾಲಿನಲ್ಲಿದ್ದ 41.36 ದಶಲಕ್ಷ ಟನ್‌ಗೆ ಹೋಲಿಸಿದರೆ ಶೇ.4ರಷ್ಟು ಕಡಿಮೆಯಾಗಲಿದೆ. ಸೋಯಾಬೀನ್ ಉತ್ಪಾದನೆ 13.05 ದಶಲಕ್ಷ ಟನ್‌ದಷ್ಟಾಗಲಿದೆ. ಕಳೆದ ಬಾರಿ 14.99 ದಶಲಕ್ಷ ಟನ್‌ದಷ್ಟಾಗಿತ್ತು. ಸಾಸಿವೆ ಉತ್ಪಾದನೆ 13.16 ದಶಲಕ್ಷ ಟನ್‌ದಷ್ಟಾಗಲಿದೆ.

ಹತ್ತಿ ಉತ್ಪಾದನೆ 32.52 ದಶಲಕ್ಷ ಬೇಲ್ಸ್‌ದಷ್ಟಾಗಲಿದೆ(ಪ್ರತಿ 170 ಕೆಜಿ). ಕಳೆದ ವರ್ಷ 33.66 ದಶಲಕ್ಷ ಬೇಲ್ಸ್‌ದಷ್ಟಾಗಿತ್ತು. ಕಬ್ಬು ಉತ್ಪಾದನೆ 442.52 ದಶಲಕ್ಷ ಟನ್‌ದಷ್ಟಾಗಲಿದೆ. ಈ ಹಿಂದೆ 490.53 ದಶಲಕ್ಷ ಟನ್‌ದಷ್ಟಿತ್ತು. ಸೆಣಬು ಉತ್ಪಾದನೆ 9.26 ದಶಲಕ್ಷ ದಶಲಕ್ಷ ಬೇಲ್ಸ್‌ದಷ್ಟಾಗಲಿದೆ. ಹಿಂದಿನ ಸಾಲಿನಲ್ಲಿ 9.35 ದಶಲಕ್ಷ ಬೇಲ್ಸ್‌ದಷ್ಟಾಗಿತ್ತು.

ಇನ್ನು 2024-25ನೇ ಸಾಲಿನ ಆಹಾರಧಾನ್ಯ ಉತ್ಪಾದನೆ ಗುರಿಯನ್ನು ಸರ್ಕಾರ ಈಗಾಗಲೇ 340.40 ದಶಲಕ್ಷ ಟನ್‌ಗೆ ನಿಗದಿಪಡಿಸಿದೆ. ಪ್ರಸಕ್ತ ಸಾಲಿನ ಮುಂಗಾರು ವಾಡಿಕೆಯ ಸ್ವರೂಪದಲ್ಲಿರುವದೆಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಇದರಿಂದಾಗಿ ಆಹಾರ ಉತ್ಪಾದನೆ ಗುರಿ ತಲುಪಬಹುದೆಂದು ಸರಕಾರ ವಿಶ್ವಾಸ ವ್ಯಕ್ತಪಡಿಸಿದೆ.

Economics Times Pg.08

# Consumption Divergence



In a diverging trend from other states, urban areas in West Bengal and Haryana increased their share of food consumption over the last decade, according to data released last week. Conveyance accounted for the largest share of non-food spending across states. ISHAAN GERA takes a look:

## 1] RURAL FOOD CONSUMPTION DECLINES ACROSS STATES

Maharashtra food consumption was 11% points lower in 2022-23 than 2011-12

Punjab witnessed the lowest 2% point decline

Share of food consumption in total

| State | 2022-23 | 2011-12 |
|---|---|---|
| Assam | 54 | 61 |
| Bihar | 54 | 59 |
| Chhattisgarh | 46 | 53 |
| Gujarat | 49 | 55 |
| Haryana | 46 | 52 |
| Jharkhand | 48 | 58 |
| Karnataka | 45 | 51 |
| Kerala | 39 | 43 |
| Madhya Pradesh | 45 | 53 |
| Maharashtra | 41 | 52 |
| Odisha | 48 | 57 |
| Punjab | 42 | 44 |
| Rajasthan | 44 | 51 |
| Tamil Nadu | 42 | 52 |
| Uttar Pradesh | 47 | 53 |
| West Bengal | 51 | 58 |
| All-India | 46 | 53 |

## 2] IT ALSO FALLS FOR URBAN AREAS EXCEPT BENGAL, HARYANA

Urban decline lower than rural

Haryana and West Bengal witness nearly a percentage point rise in food consumption

Change in food consumption between 2022-23 and 2011-12, percentage points

| State | Change | State | Change |
|---|---|---|---|
| Odisha | -5.4 | Chhattisgarh | -3.2 |
| Rajasthan | -4.8 | Gujarat | -3.2 |
| Tamil Nadu | -4.7 | Uttar Pradesh | -3 |
| Maharashtra | -4.6 | Kerala | -1 |
| Jharkhand | -4.5 | Punjab | -1 |
| Karnataka | -4.1 | Assam | -0.7 |
| All-India | -3.6 | West Bengal | 0.8 |
| Bihar | -3.5 | Haryana | 0.8 |
| Madhya Pradesh | -3.2 | | |

## 3] CONVEYANCE MAJOR EXPENSE IN URBAN AND RURAL AREAS IN 2022-23

| State | Category* | % share in non-food items |
|---|---|---|
| Andhra Pradesh | Medical | 16.6 |
| Assam | Fuel & Light | 15.3 |
| Bihar | Fuel & Light | 14 |
| Chhattisgarh | Fuel & Light | 16.1 |
| Gujarat | Conveyance | 16.6 |
| Haryana | Conveyance | 14 |
| Jharkhand | Fuel & Light | 13.8 |
| Karnataka | Conveyance | 15.6 |
| Kerala | Conveyance | 18.9 |
| Madhya Pradesh | Conveyance | 15.3 |
| Maharashtra | Conveyance | 16 |
| Odisha | Fuel & Light | 17 |
| Punjab | Conveyance | 16.3 |
| Rajasthan | Conveyance | 15.7 |
| Tamil Nadu | Conveyance | 18 |
| Telangana | Conveyance | 15 |
| Uttar Pradesh | Medical | 15.5 |
| West Bengal | Medical | 16.8 |
| All-India | Conveyance | 14.1 |

*with highest spending

UP, West Bengal and Andhra Pradesh spend more on medical


5 of 18 states spend more on fuel and light

Source: MoSPI

# ಟೊಮೆಟೋ ಈಗ ಕೆಜಿಗೆ ₹ 80

## ರೋಗಬಾಧೆಯಿಂದ ಬೆಳೆ ಹಾಳು, ಪೂರೈಕೆ ಕುಸಿತ ಶೀಘ್ರ ದರ ಕೇಜಿಗೆ 100-120 ರು. ಆಗಬಹುದು

**ಬೆಂಗಳೂರು:** ಮಾರುಕಟ್ಟೆಯಲ್ಲಿ ಟೊಮೆಟೋ ದರ ಮತ್ತೆ ಹೆಚ್ಚಳ ಕಂಡಿದ್ದು, ಮಂಗಳವಾರ ಕೆಜಿಗೆ ಗರಿಷ್ಠ ₹ 80 ನಂತೆ ಮಾರಾಟವಾಗಿದೆ. ಮಳೆ ಹಾಗೂ ರೋಗಬಾಧೆ ಕಾರಣದಿಂದ ಮಾರುಕಟ್ಟೆಗೆ ಪೂರೈಕೆ ಗಣನೀಯವಾಗಿ ಕುಸಿದಿರುವುದು ಬೆಲೆ ಏರಿಕೆಗೆ ಕಾರಣವಾಗಿದೆ. ಶೀಘ್ರ ದರ ₹ 100-120 ಆದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ವರ್ತಕರು ಹೇಳಿದ್ದಾರೆ.



ಹಸಿರು ತರಕಾರಿ, ಸೊಪ್ಪು, ಬೀನ್ಸ್ ಬಳಿಕ ಇದೀಗ ಕೆಂಪು ಸುಂದರಿ ಟೊಮೆಟೋ ಬೆಲೆ ಏಕಾಏಕಿ ಏರಿಕೆಯಾಗಿದೆ. ಕಳೆದ ನಾಲ್ಕೈದು ದಿನಗಳ ಹಿಂದೆ ಬೆಂಗಳೂರಿನ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೇಟೊ ಬೆಲೆ ಕೆಜಿಗೆ ₹ 40 ರೂವರೆಗೆ ಇತ್ತು. ಆದರೆ ಈಗ ₹ 80ಕ್ಕೆ ಏರಿಕೆಯಾಗಿದೆ. ಎರಡು ಹಾಗೂ ಮೂರನೇ ದರ್ಜೆಯ ಟೊಮೆಟೋ ಕ್ರಮವಾಗಿ ₹ 50, ₹ 40 ಕ್ಕೆ ದೊರಕುತ್ತಿದೆ. ದಿನಬಳಕೆಯ ಟೊಮೆಟೋ ಬೆಲೆಯೇರಿಕೆ ಗ್ರಾಹಕರನ್ನು ಚಿಂತೆಗೀಡು ಮಾಡಿದೆ.

ಟೊಮೆಟೋ ಸಗಟು ವ್ಯಾಪಾರಸ್ಥರಾದ ಇಬ್ರಾಸ್ ಖಾನ್ ಮಾತನಾಡಿ, ಮಂಡ್ಯ, ಮೈಸೂರು, ಮದ್ದೂರು, ಕನಕಪುರ ಬೆಲ್ಟ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಟೊಮೆಟೋ ಪ್ರಮಾಣ ಬಹುತೇಕ ಕುಸಿದಿದೆ. ಚಿಕ್ಕಮಗಳೂರು, ಕಡೂರು ಕಡೆಯಿಂದ ಕಳೆದ ಎರಡು ವರ್ಷದಿಂದಲೂ ಟೊಮೆಟೋ ಸರಿಯಾಗಿ ಬರುತ್ತಿಲ್ಲ. ಇನ್ನು ಕೋಲಾರದಲ್ಲೂ ಮಳೆ, ರೋಗಬಾಧೆ ಪೂರೈಕೆ ಮುಕ್ಕಾಲು ಭಾಗದಷ್ಟು ಕಡಿಮೆಯಾಗಿದೆ ಎಂದರು.